# ✱ 'ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ' – ೨ ✱

ಸ್ವಾಮಿ ವೀರೇಶಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

### ರಕ್ಷಾವರಣಗಳು

ಚಿತ್ತಶುದ್ಧಿಯ ಮೂಲಕವೇ ಭಕ್ತಿಜ್ಞಾನಗಳ ವಿಕಾಸ. ಅವಕ್ಕೆ ಪೂರ್ವಸಿದ್ಧತೆ ರಕ್ಷಣೆ ಬೇಕು. ಶರಣಧರ್ಮ ಅಂತಹ ಎಂಟು ರಕ್ಷಾವರಣಗಳನ್ನು ಹೇಳುತ್ತದೆ.

೧.ಗುರು : ಮುಮುಕ್ಷುವಿಗೆ ದೀಕ್ಷೆ ಕೊಟ್ಟು ಜ್ಞಾನೋಪದೇಶ ಮಾಡುವವನೇ ಗುರು.

೨.ಲಿಂಗ : ಲಿಂಗವೆಂದರೆ ಪರಮಾತ್ಮ, ಸಚ್ಚಿದಾನಂದ ಸ್ವರೂಪ. ಶಿಲೆಯಲ್ಲಿ ಮಾಡಿದ ಲಿಂಗ ಬರಿಯ ತೋರಿಕೆಯ ಲಿಂಗ. ಲಿಂಗದಲ್ಲಿ ಮೂರು ಭೇದಗಳು: ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗ. ಅವನ್ನು ಕ್ರಮವಾಗಿ ಕಾರಣಶರೀರ, ಸೂಕ್ಷ್ಮಶರೀರ ಮತ್ತು ಸ್ಥೂಲಶರೀರಗಳಲ್ಲಿ ಗುರು ಸ್ಥಾಪಿಸುವನು. ಇದೇ ನಿಜವಾದ ದೀಕ್ಷೆ.

೩.ಜಂಗಮ: ಜಂಗಮ ಜ್ಞಾನಮೂರ್ತಿ. ಭಿಕ್ಷಾಟನೆ ಮಾಡುತ್ತ ತತ್ತ್ವವನ್ನು ಬೋಧಿಸುವವನು. ಗುರು–ಲಿಂಗ–ಜಂಗಮರಲ್ಲಿ ಭೇದ ಮಾಡಬಾರದೆಂಬುದು ಹಿರಿಯರ ಶಾಸನ.

೪.ಪಾದೋದಕ: ಗುರು–ಲಿಂಗ–ಜಂಗಮರ ಪುಣ್ಯ ಸ್ಪರ್ಶದಿಂದ ಪುನೀತವಾದ ಉದಕವೇ ಪಾದೋದಕ. ಇದರ ಸೇವನೆಯಿಂದ ದೇಹಶುದ್ಧಿ, ಮನಶ್ಶುದ್ಧಿ ಮತ್ತು ಭಾವಶುದ್ಧಿ ಉಂಟಾಗುತ್ತದೆ.

೫.ಪ್ರಸಾದ: ಗುರು–ಲಿಂಗ–ಜಂಗಮರು ಅನುಗ್ರಹಿಸಿ ಕೊಟ್ಟುದೇ ಪ್ರಸಾದ. ಪ್ರಸಾದ ಚಿತ್ತಶುದ್ಧಿಯನ್ನು ಉಂಟುಮಾಡುವುದು. ಮನಸ್ಸಿಗೆ ಶಾಂತಿಯನ್ನುಂಟುಮಾಡುವುದು.

೬.ವಿಭೂತಿ: ಪರಮೇಶ್ವರನು ಧರಿಸಿದ್ದರಿಂದ ಪಾವನವಾಯಿತು ವಿಭೂತಿ. ಕಾಮನನ್ನು ದಹಿಸಿದ ಶಿವ ಆ ಭಸ್ಮವನ್ನು ಧಾರಣೆ ಮಾಡಿಕೊಂಡನು. ಆದ್ದರಿಂದ ನಾವು ವಿಭೂತಿ ಯನ್ನು ಧರಿಸಿದರೆ ನಮ್ಮ ಪಾಪಗಳೂ ದಹಿಸುತ್ತವೆ ಎಂದು ನಂಬಿಕೆ.

೭.ರುದ್ರಾಕ್ಷಿ: ತ್ರಿಪುರದಹನ ಕಾಲದಲ್ಲಿ ಈಶ್ವರನ ನೇತ್ರಗಳಿಂದ ಬಿದ್ದ ಅಶ್ರುಬಿಂದುಗಳೇ ರುದ್ರಾಕ್ಷಿಗಳಾದುವೆಂದು ನಂಬಿಕೆ. ಶಿವನ ಚಿಹ್ನೆಗಳನ್ನು ಧರಿಸಿ ಶಿವನಂತಾಗಬೇಕೆಂಬ ಬಯಕೆಯನ್ನು ಇಲ್ಲಿ ನಾವು ಕಾಣುತ್ತೇವೆ.

೮.ಮಂತ್ರ: ಗುರು ಶಿಷ್ಯನಿಗೆ ಬೋಧಿಸುವ ರಹಸ್ಯನಾಮವೇ ಮಂತ್ರ. ಎಲ್ಲಕ್ಕಿಂತ ಶ್ರೇಷ್ಠವಾದುದು 'ನಮಃ ಶಿವಾಯ' ಎಂಬ ಪಂಚಾಕ್ಷರೀ ಮಂತ್ರ.

### ಮೂರು ಕಲ್ಮಷಗಳು

ಮಾನವನಿಗೆ ಮೂರು ತೆರನಾದ ಕಲ್ಮಷಗಳು ಗಂಟು ಬಿದ್ದಿರುತ್ತವೆ: ಆಣವಮಲ, ಮಾಯಾಮಲ ಮತ್ತು ಕಾರ್ಮಿಕ ಮಲ.

೧.ಆಣವಮಲ: ಜೀವಾತ್ಮ ನಿಜವಾಗಿಯೂ ಸರ್ವಾತ್ಮಕನಾದವನು, ಪರಿಪೂರ್ಣನು. ಅವನಲ್ಲಿ ತಾನು ಅಣು ಎಂಬ ಭಾವವನ್ನು ಮೂಡಿಸಿ, ಶಿವ ಬೇರೆ, ತಾನು ಬೇರೆ ಎಂಬ ಭಾವವನ್ನು ಮೂಡಿಸುವುದೇ ಆಣವಮಲ. ಇದು ಕಾರಣಶರೀರಕ್ಕೆ ಮೂಲ.

೨.ಮಾಯಾಮಲ: ಸರ್ವಜ್ಞತ್ವದ ಬದಲಾಗಿ ಕಿಂಚಿಜ್ಞತ್ವವನ್ನು ಜೀವಿಯಲ್ಲಿ ಉಂಟುಮಾಡುವುದು ಮಾಯಾಮಲ. ಇದು ಸೂಕ್ಷ್ಮಶರೀರಕ್ಕೆ ಕಾರಣ.

೩.ಕಾರ್ಮಿಕಮಲ: ಸ್ಥೂಲದೇಹಕ್ಕೆ ಕಾರಣವಾಗಿ, ಜೀವಿಗಳ ಕ್ಷುದ್ರ ಕರ್ಮಗಳಿಗೂ ಹಾಗೂ ಅವುಗಳಿಂದುಂಟಾಗುವ ಫಲಗಳ ಅನುಭವಕ್ಕೂ ಕಾರಣವಾಗಿರುವುದು ಕಾರ್ಮಿಕಮಲ.

ಈ ಮಲಗಳ ಸಂಪರ್ಕದಿಂದ ಪರಿಶುದ್ಧ ಜೀವಾತ್ಮ ತಾನು ಸಂಸಾರಿಯೆಂದು ಬಗೆಯುತ್ತಾನೆ. ಜನ್ಮ–ಮೃತ್ಯುಗಳ ಜಂಜಾಟದಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಾನೆ. ಇದನ್ನೇ ಸಂಸಾರವೆಂದು ಕರೆಯುವರು.

### ಲಿಂಗ–ಅಂಗ; ಶಕ್ತಿ–ಭಕ್ತಿ

ಪರವಸ್ತುವೊಂದೇ ಲಿಂಗ. ಅಲ್ಲಿ ಯಾವ ಭೇದವೂ ಇಲ್ಲ. ಯಾವಾಗ ಪರಮಾತ್ಮ ಜೀವಾತ್ಮರೆಂಬ ಭೇದ ಭಾವನೆ ಬರುವುದೋ ಅದು ಲಿಂಗವಲ್ಲ, ಅಂಗ. ಲಿಂಗ ಅದ್ವಯ ವಸ್ತುವಿನ ದ್ಯೋತಕ. ಅಂಗ ದ್ವೈತಭಾವನೆಯ ದ್ಯೋತಕ. ಲಿಂಗವನ್ನು ಬಿಟ್ಟರೆ ಅಂಗವಿರಲಾರದು; ಅಂಗವು ಲಿಂಗದ ಪರಿಣಾಮರೂಪ ಅಷ್ಟೆ. ಲಿಂಗವನ್ನು ಆಶ್ರಯಿಸಿದ ಚೈತನ್ಯವನ್ನು 'ಶಕ್ತಿ' ಎನ್ನುತ್ತಾರೆ. ಅದರ ಒಂದು ಭಾಗವೇ ಅಂಗದಲ್ಲಿ ಸೇರಿಕೊಂಡು 'ಭಕ್ತಿ' ಎಂಬ ಹೆಸರನ್ನು ಪಡೆಯುತ್ತದೆ.

### ಸೃಷ್ಟಿಕ್ರಮ

ಕಾರಣಶರೀರ ಒದಗಿಬಂದಾಗ ಅಂಗ ಯೋಗಾಂಗವಾಗುವುದು, ಸೂಕ್ಷ್ಮಶರೀರದಲ್ಲಿ ಇದು ಭೋಗಾಂಗ ಎನ್ನಿಸಿಕೊಳ್ಳುವುದು, ಸ್ಥೂಲಶರೀರದಲ್ಲಿ ಅದೇ ತ್ಯಾಗಾಂಗವಾಗಿ ಪರಿಣಮಿಸುವುದು. ಈ ಶರೀರಗಳು ಉಂಟಾಗಿರುವುದು ಲಿಂಗ

ವನ್ನು ಸೇವಿಸಲೆಂದೇ. ಈ ಶರೀರಗಳಲ್ಲಿ ಹಿಂದೆ ಹೇಳಿದಂತೆ ಕ್ರಮವಾಗಿ ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳಾಗಿ ಲಿಂಗವು ಸೇವೆಯನ್ನು ಮಾಡಿಸಿಕೊಳ್ಳುವುದು. ಪ್ರತಿಯೊಂದು ಲಿಂಗಸ್ಥಲವೂ, ಹಾಗೆಯೇ ಅಂಗಸ್ಥಲವೂ ಎರಡೆರಡಾಗಿ ವಿಭಜನೆ ಹೊಂದುವುದು. ಹೀಗೆ, ಆರು ಲಿಂಗಸ್ಥಲಗಳೂ ಆರು ಅಂಗಸ್ಥಲಗಳೂ ಉಂಟಾಗುವುದೇ ಸೃಷ್ಟಿಕ್ರಮ.

### ಷಟ್‌ಸ್ಥಲಗಳ ಸಾಧನಾಮಾರ್ಗ

ಅಂಗನಿಗೆ ಲಿಂಗಸೇವೆ ಮಾಡುವುದೇ ಸಹಜಧರ್ಮ. ಆದರೂ ಕೂಡ, ಇಂದ್ರಿಯಗಳು ಹೊರಮುಖವಾಗಿ ಬಾಹ್ಯ ಪ್ರಪಂಚದ ವಸ್ತುವಿಷಯಗಳ ಕಡೆಗೆ ಹರಿಯುವುದರಿಂದ ಅವುಗಳಲ್ಲೆ ಮಗ್ನವಾಗಿರುತ್ತವೆ. ಅವನ್ನು ಒಳಮುಖ ಮಾಡು ವುದು, ಪರಮಾತ್ಮನ ಕಡೆ ತಿರುಗಿಸುವುದೇ ಸಾಧನೆ.

ಅಷ್ಟ ಆವರಣಗಳ ಕವಚವನ್ನು ಧರಿಸಿ ರಕ್ಷಿತನಾದ ಸಾಧಕ ನಿಗೆ ಗುರುವು ಷಟ್ಸ್ಥಲಗಳ ಸಾಧನಾಮಾರ್ಗವನ್ನು ಬೋಧಿಸು ತ್ತಾನೆ. ಅವು ಅನುಭಾವವು ಹೆಚ್ಚು ಹೆಚ್ಚು ಪ್ರಖರಗೊಳ್ಳುವ, ನಿಚ್ಚಳಗೊಳ್ಳುವ, ಆಧ್ಯಾತ್ಮಿಕ ಶಿಖರಕ್ಕೆ ಕೊಂಡೊಯ್ಯುವ ಘಟ್ಟಗಳು ಕೂಡ. ಅಂಗವು ಭಕ್ತಿಯ ಸಹಾಯದಿಂದ ವಿಕಾಸ ಮಾರ್ಗದಲ್ಲಿ ಏರಿಹೋಗಿ, ಲಿಂಗದೊಡನೆ ಸಾಮರಸ್ಯವನ್ನು ಪಡೆಯುವ ಮೆಟ್ಟಿಲುಗಳೇ ಅವು.

### ಭಕ್ತಸ್ಥಲ

ಮೊದಲನೆಯದು ಭಕ್ತಸ್ಥಲ. ಅದನ್ನು ಶರಣರು ಹೀಗೆ ವಿವರಿಸುತ್ತಾರೆ:

ಸದಾಚಾರದಲ್ಲಿ ನಡೆವನ, ಶಿವನಲ್ಲಿ ಭಕ್ತಿಯಾಗಿಪ್ಪನ
ಶಿವಲಾಂಛನವ ಕಂಡಲ್ಲಿ ವಂದನೆಗೆಯ್ಯುತಿಪ್ಪನ
ಲಿಂಗ ಜಂಗಮವ ಒಂದೇ ಭಾವದಲ್ಲಿ ಕಂಡು
ಭೃತ್ಯಾಚಾರಯುಕ್ತವಾಗಿರಬಲ್ಲಡೆ
ಭಕ್ತಸ್ಥಲವೆಂದೆಂಬೆನಯ್ಯ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ

ಮಾನವ ಮನಸ್ಸಿನ ವಿಕಾಸಮಾರ್ಗದಲ್ಲಿ ಭಕ್ತಿ ಮೊದಲನೆಯ ಹೆಜ್ಜೆ. ಶರಣರ ಭಕ್ತಿ ಭಾವೋದ್ರೇಕವಲ್ಲ. ಅದು ವಿಚಾರಪ್ರಧಾನ ವಾದದ್ದು. ಮುಂದಿನ ಆಧ್ಯಾತ್ಮಿಕ ಹಂತಗಳಿಗೆ ಸಿದ್ಧತೆಯ ರೂಪದ್ದು. ಇಲ್ಲಿ ಜೀವನದ ಗುರಿ ಗೋಚರಿಸುತ್ತದೆ. ಚರಾಚರ ವಸ್ತುಗಳಿಗೆಲ್ಲ ಕಾರಣ ಭಗವತ್ ಶಕ್ತಿಯೆಂಬ ಅರಿವಾಗಿ ಭಕ್ತನ ಹೃದಯ ಆ ಶಕ್ತಿಗೆ ಪ್ರೇಮದಿಂದ ತನ್ನನ್ನು ತಾನು ಸಮರ್ಪಿಸಿ ಕೊಳ್ಳುತ್ತದೆ.

### ಮಾಹೇಶ್ವರ ಸ್ಥಲ

ಎರಡನೆಯದು ಮಾಹೇಶ್ವರ ಸ್ಥಲ. ಅದನ್ನು ಶರಣರು ಹೀಗೆ ವಿವರಿಸುತ್ತಾರೆ:

ಅನೃತ, ಅನಾಚಾರ, ಅನ್ಯಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ,
ಇವ ಬಿಟ್ಟು ಲಿಂಗನಿಷ್ಠೆಯಿಂದ ಶುದ್ಧಾತ್ಮನಾಗಿರಬಲ್ಲಡೆ
ಸ್ಥಲವಿದೆಂಬೆನಯ್ಯ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ

ಇಲ್ಲಿ ಭಕ್ತಿ ನಿಷ್ಠೆಯಾಗಿ ಪರಿಣಮಿಸುತ್ತದೆ. ಸತತ ಪ್ರಯತ್ನದ ಫಲ ಇಲ್ಲಿ ಭಕ್ತನಿಗೆ ಒದಗಿಬರುತ್ತದೆ. "ಉರಿ ಬರಲಿ, ಸಿರಿ ಬರಲಿ, ಬೇಕು ಬೇಡೆನ್ನದೆ" ಬಂದುದನ್ನು ಬಂದಂತೆ ಎದುರಿಸಿ ಭಕ್ತನು ಮುಂದುವರಿಯುತ್ತಾನೆ. ನಿಷ್ಠಾಭಕ್ತಿ ಮಹೇಶ್ವರ ಸ್ಥಲದ ತಿರುಳು. ಇದೇ ಭಕ್ತನಲ್ಲಿ ಫಲವಾಗಿ ಮುಂಬರಿಯುವುದು:

ನೈಷ್ಠೆ ನೆಲೆಗೊಳ್ಳಬೇಕು ಗುರುಭಕ್ತಿ ಮಾಡುವಲ್ಲಿ
ನೈಷ್ಠೆ ನೆಲೆಗೊಳ್ಳಬೇಕು ಲಿಂಗಪೂಜೆ ಮಾಡುವಲ್ಲಿ
ನೈಷ್ಠೆ ನೆಲೆಗೊಳ್ಳಬೇಕು ಜಂಗಮವನರ್ಚಿಸುವಲ್ಲಿ
ನೈಷ್ಠೆ ನೆಲೆಗೊಳ್ಳಬೇಕು ಪಾದೋದಕ ಪ್ರಸಾದ ಕೊಂಬಲ್ಲಿ
ನೈಷ್ಠೆ ನೆಲೆಗೊಳ್ಳಬೇಕು ನಮ್ಮ ಅಖಂಡೇಶ್ವರನ ಒಲಿಸುವಲ್ಲಿ

### ಪ್ರಸಾದಿ ಸ್ಥಲ

ಮೂರನೆಯ ಆಧ್ಯಾತ್ಮಿಕ ಮೆಟ್ಟಲೇ ಪ್ರಸಾದಿ ಸ್ಥಲ.

ಸರ್ವಾಂಗವನು ಲಿಂಗನಿಷ್ಠೆಯಿಂದ ಗಟ್ಟಿಗೊಳಿಸಿ,
ಮನವ ಉನ್ಮನಿಯ ಅವಸ್ಥೆಯನೈದಿಸಿ, ಶತಪತ್ರದಲ್ಲಿ ಸೈತಿಟ್ಟು,
ಲಿಂಗಕ್ಕೆ ಅರ್ಪಿಸಿದ ನೈವೇದ್ಯವ ಲಿಂಗ
ನೆನಪಿನಲ್ಲಿಯೇ ಸ್ವೀಕರಿಸುವುದು.
ಅಂಗಾರ್ಪಿತವ ವಿಸರ್ಜಿಸುವುದಯ್ಯ,
ತಟ್ಟುವ ಮುಟ್ಟುವ ಸೋಂಕುವ
ಮರ್ಮವನರಿತು ಲಿಂಗಮುಖಕ್ಕೆ ನಿವೇದಿಸಿ
ಲಿಂಗಪ್ರಸಾದವ ಸ್ವೀಕರಿಸಬಲ್ಲಡೆ
ಪ್ರಸಾದಿಸ್ಥಲವಿದೆಂಬೆನಯ್ಯ
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ

ಪ್ರಸಾದ ಎಂಬ ಶಬ್ದಕ್ಕೆ ವ್ಯಾಪಕ ಅರ್ಥವಿದೆ. **"ಈ ಸೃಷ್ಟಿಯೇ ಶಿವನ ಪ್ರಸಾದ"**. ದೇವರ ದಾಸಿಮಯ್ಯನ ಮಾತು ಗಳಲ್ಲಿ **"ತಕ್ಕೈಸಿ ನಿಮ್ಮುವನಪ್ಪಿಕೊಂಡಡೆ ಅದೇ ನಿಶ್ಚಯ ಪ್ರಸಾದ."** ಇದರ ಅರ್ಥ ಲಿಂಗಶಕ್ತಿಗೆ ತನ್ನನ್ನೇ ಪ್ರಸಾದರೂಪದಲ್ಲಿ ಸಮರ್ಪಿಸಿಕೊಳ್ಳಬೇಕು ಎಂದು. ಈ ಸ್ಥಿತಿಯಲ್ಲಿ ಸಾಧಕ ಒಂದು ಕಡೆ, ಶಿವನ ಕರುಣೆಯು ತನ್ನೆಡೆಗೆ ಅವತರಿಸಿ ಬರುವುದನ್ನೂ, ಇನ್ನೊಂದು ಕಡೆ ತನ್ನ ಹೃದಯವು ಶಿವ ನೊಡನೆ ಸೇರಲು ಮೇಲುಮೇಲಕ್ಕೆ ಉತ್ತರಣಗೊಳ್ಳುವುದನ್ನೂ

ಕಂಡುಕೊಳ್ಳುತ್ತಾನೆ. ಗುರು-ಲಿಂಗ-ಜಂಗಮರ ಕೃಪೆಯಿಂದ ಅಹಂಕಾರವಳಿದರೆ ಮನಃಪ್ರಸಾದ ಲಭಿಸುತ್ತದೆ. ಅದು ಸರ್ವ ದುಃಖಗಳನ್ನೂ ನಾಶಮಾಡುತ್ತದೆ.

**ಪ್ರಾಣಲಿಂಗಿ ಸ್ಥಲ**

ಮೇಲೆ ಹೇಳಿದ ಸ್ಥಲಗಳಲ್ಲಿ ಕರ್ಮ ಪ್ರಧಾನವಾದರೆ, ಜ್ಞಾನ ವಿಕಾಸ ಪ್ರಕ್ರಿಯೆ ಆರಂಭವಾಗುವುದು ಪ್ರಾಣಲಿಂಗಿ ಸ್ಥಲದಿಂದ. ಹೊರಗೆ ಸುತ್ತುವ ಮನವನ್ನು ತಡೆದು ಒಳಗಿರುವ ದೇವನತ್ತ ಹರಿಸುವ ಅಂತರಂಗದ ಆಧ್ಯಾತ್ಮಿಕ ಸಾಧನೆಯ ಆರಂಭದ ಘಟ್ಟ ಇದು.

**ಲಿಂಗದಲ್ಲಿ ಪ್ರಾಣವ ನಿಲಿಸಿ, ಪ್ರಾಣದಲ್ಲಿ ಲಿಂಗವನಿರಿಸಿ**
**ನೆನವುತಿದ್ದ ಕಾರಣ ಪ್ರಾಣಲಿಂಗವಾಯಿತು**
**ಆ ಲಿಂಗ ಸರ್ವಕರಣಂಗಳ ವೇಧಿಸಿ**
**ಕರಣಂಗಳು ಲಿಂಗಕರಣಂಗಳಾದ ಕಾರಣ**
**ಒಳಗೆ ಕರತಳಾಮಲಕದಂತೆ ಲಿಂಗ ನೆಲೆಗೊಂಡಿತ್ತಾಗಿ**
**ಹೊರೆದೆನೆಂದು ಅರಿಯೆನು**
**ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನೀವು ಪ್ರಾಣಲಿಂಗವಾಗಿ**

ಶಿವನ ಕಾರುಣ್ಯವೆಂಬ ಪ್ರಸಾದವನ್ನು ಪಡೆದ ಸಾಧಕನ ಮನಸ್ಸು ಇಲ್ಲಿ ಅಂತರ್ಮುಖವಾಗುತ್ತದೆ, **'ಎತ್ತೆತ್ತ ನೋಡಿದರತ್ತತ್ತ'** ಇರುವ ಶಿವ ತನ್ನಲ್ಲಿಯೇ ಇರುವುದನ್ನು ಸಾಧಕ ಇಲ್ಲಿ ಕಂಡುಕೊಳ್ಳುವನು.

ಬಾಹ್ಯಲಿಂಗ ಪೂಜೆಯಿಂದ ಸಾಧನೆ ಬಳಿಕ ಪ್ರಾಣಲಿಂಗ ಪೂಜೆಯತ್ತ ಉದಾತ್ತಗೊಳ್ಳಬೇಕು. ಬಹಿರ್ಮುಖದ ಇಷ್ಟ ಲಿಂಗದ ಸಾಧನೆ ಅಂತರ್ಮುಖವಾಗಿ ಪ್ರಾಣಲಿಂಗದ ಪೂಜೆಯಾಗಬೇಕು. ಅಲ್ಲಮಪ್ರಭು ತನ್ನ ಅನುಭಾವದ ಮಾತನ್ನು ಹೀಗೆ ಹೇಳುವನು:

**ಉದಕದೊಳಗಿರ್ದ ಶತಪತ್ರದಂತೆ**
**ಸಮರದೊಳಿರ್ದು ಇಲ್ಲದಿರಬೇಕು ಶರಣನು**
**ಕಾಯವೇ ಪೀಠಿಕೆ, ಪ್ರಾಣವೇ ಲಿಂಗವಾದ ಬಳಿಕ**
**ಕೊರಳಲ್ಲೇಕೋ ಶರಣಂಗೆ ಗುಹೇಶ್ವರಾ**

ಅಲ್ಲಿ ನಡೆಯುವ ಪೂಜೆ ಹೇಗಿರುತ್ತದೆ ಗೊತ್ತೇ?

**ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ**
**ಆಕಾಶಗಂಗೆಯಲ್ಲಿ ಮಜ್ಜನ**
**ಹೂವಿಲ್ಲದ ಪರಿಮಳದ ಪೂಜೆ**
**ಹೃದಯಕಮಲದಲ್ಲಿ 'ಶಿವ ಶಿವ' ಎಂಬ ಶಬ್ದ**
**ಇದು ಅದ್ವೈತ ಕಾಣಾ ಗುಹೇಶ್ವರಾ**

ಭಕ್ತಿಸ್ಥಲದಲ್ಲಿನ ಭಕ್ತಿ "ಶ್ರದ್ಧಾಭಕ್ತಿ", ಮಾಹೇಶ್ವರಸ್ಥಲದಲ್ಲಿನ ಭಕ್ತಿ "ನೈಷ್ಠಿಕ ಭಕ್ತಿ", ಪ್ರಸಾದಿಸ್ಥಲದಲ್ಲಿ "ಸಾವಧಾನ ಭಕ್ತಿ", ಪ್ರಾಣಲಿಂಗಿ ಸ್ಥಲದಲ್ಲಿಯಾದರೋ ಅದೇ "ಅನುಭಾವದ ಭಕ್ತಿ"ಯಾಗಿ ಮಾಗುತ್ತದೆ.

**ಶರಣಸ್ಥಲ**

ಮಿಕ್ಕ ಎರಡು ಸ್ಥಲಗಳು ಅನುಭಾವ ಮಾರ್ಗದ ಕೊನೆಯ ಮೆಟ್ಟಿಲುಗಳು. ಶರಣನೆಂದರೆ ಯಾರು? ದೇಹ ಸಂಸಾರಾದಿ ಮೋಹಗಳನ್ನು ಬಿಟ್ಟವನೇ ಶರಣ. ನಿತ್ಯಾನಿತ್ಯಗಳನ್ನು ತಿಳಿದವನೇ ಶರಣ, ಲಿಂಗದೊಡನೆ ಮನವ ಒಂದಾಗಿ ನೆಲೆ ಇಟ್ಟು ಲಿಂಗದ ನೆನಹಿನಿಂದ ವ್ಯವಹರಿಸುವವನೇ ಶರಣ.

**ಲಿಂಗವೇ ಪತಿಯಾಗಿ ಅನ್ಯವನರಿಯದೆ**
**ಪಂಚೇಂದ್ರಿಯ ವಿರಹಿತನಾಗಿ**
**ತೆರಹಿಲ್ಲದ ಅರುಹು ತಾನಾಗಿ**
**ನೆರೆ ಅರುಹಿನೊಳು ನಿಬ್ಬೆರಗಾಗಿ**
**ಹೃದಯಕಮಲ ಮಧ್ಯದಲ್ಲಿ**
**ಪರಮೇಶ್ವರನೊಳಗಣ ಪರಮ ಸ್ನೇಹವೆರಸಿ**
**ಅಗಲದಿಪ್ಪುದೀಗ ಶರಣಸ್ಥಲವೆಂದೆಂಬೆನಯ್ಯಾ**
**ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ**

ಶರಣನು ಆಕಾಂಕ್ಷಿ, ಆನಂದದ ಆಕಾಂಕ್ಷಿ. ತನ್ನ ಸರ್ವಸ್ವವನ್ನೂ ಶಿವನಿಗೆ ಅರ್ಪಿಸುವುದರಿಂದ ಉಂಟಾಗುವ ಆನಂದದ ಆಕಾಂಕ್ಷಿ. ಅದೇ ಅವನಿಗೆ ಅನುಭಾವ. ಅದು ಆತನಿಗೆ ಮಾತ್ರ ಸೀಮಿತವಾಗಬಾರದು. ಸಮಾಜದ ಹಿತಕ್ಕೆ ಅರ್ಪಿತವಾಗಬೇಕು. ಸಿದ್ಧರಾಮ ಹೇಳುವಂತೆ, **"ತನ್ನ ಬಿಟ್ಟು, ಅನ್ಯರ ಹಿತ ನೋಡು"** ವವನೇ ನಿಜವಾದ ಶರಣ. ಶರಣ ಸಮಾಜಕ್ಕೆ ಆದರ್ಶ. ಅವನು ಮಾಡುವ ಕರ್ಮವೆಲ್ಲ ಪೂಜೆ, ಅವನ ಇರವೇ ಶಿವನ ಸಾನ್ನಿಧ್ಯ. ಬಸವಣ್ಣನವರು ಶರಣರ ಹಿರಿಮೆಯನ್ನು ಹೊಗಳುವುದನ್ನು ಕೇಳೋಣ:

**ಶರಣ ನಿದ್ರೆಗೈದಡೆ ಜಪ ಕಾಣಿರೊ**
**ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೊ**
**ಶರಣ ನಡೆದುದೆ ಪಾವನ ಕಾಣಿರೊ**
**ಶರಣ ನುಡಿದುದೆ ಶಿವತತ್ತ್ವ ಕಾಣಿರೊ**
**ಕೂಡಲಸಂಗನ ಶರಣನ ಕಾಯವೇ**
**ಕೈಲಾಸ ಕಾಣಿರೊ!**

ಶಿವನ ಚಿತ್‌ಸ್ವರೂಪವೇ ಶರಣ. ಹೀಗಾಗಿ ಶರಣನಿಗೆ ಶಿವನೇ ಪತಿ. ಭಕ್ತಿಯ ಸ್ವರೂಪ ಶರಣ. ಅವನು "ಕಾಮವ ತೊರೆದಾತ, ಹೇಮವ ಜರಿದಾತ, ಭಾನುವಿನ ಉದಯಕ್ಕೆ ಒಳಗಾಗದಾತ." ಇವನಲ್ಲಿ ಅಂಗ ಲಿಂಗ ಎಂಬ ಭೇದಭಾವವಿಲ್ಲ, ಅಂಗ ಲಿಂಗದಲ್ಲಿ ಸೇರಿಹೋಗಿದೆ. ಮನವೇ ಲಿಂಗವಾಗಿ, ಶರಣನೇ ಲಿಂಗಸ್ವರೂಪಿಯಾಗುವನು. ಈ ಅನುಭವ ಪಡೆದ ಅಲ್ಲಮಪ್ರಭು ಹೀಗೆ ಉದ್ಗರಿಸುವನು:

**"ನೆನೆ ನೆನೆ ಎಂದಡೆ ಏನ ನೆನೆವೆನಯ್ಯ? ಎನ್ನ ಕಾಯವೇ ಕೈಲಾಸವಾಯಿತ್ತು. ಮನವೇ ಲಿಂಗವಾಯಿತ್ತು, ತನುವೇ ಸಜ್ಜೆಯಾಯಿತ್ತು. ನೆನೆವೆಡೆ ದೇವನುಂಟೆ? ನೋಡುವಡೆ ಭಕ್ತನುಂಟೆ? ಗುಹೇಶ್ವರ ಲಿಂಗ ಲೀಯವಾಗಿತ್ತು."**

**"ಆನು ನೀನು ಎಂಬುದು ತಾನು ಇಲ್ಲ. ತಾನರಿದ ಬಳಿಕ ಏನೂ ಇಲ್ಲ. ಇಲ್ಲದೆ ಇಲ್ಲವೆ ಎಲ್ಲಿಂದ ಬರ್ಪುದೋ? ಅನುವನರಿತು, ತನುವ ಮರೆದು ಭಾವರಹಿತ ಗುಹೇಶ್ವರಾ!"**

**ಐಕ್ಯಸ್ಥಲ**

ಕೊನೆಯದು ಐಕ್ಯಸ್ಥಲ. ಇಲ್ಲಿ ಸತ್ಯವು ಪ್ರತ್ಯಕ್ಷವಾಗಿ, ಸಹಜವಾಗಿ ಮೈದೋರುತ್ತದೆ. ಇಲ್ಲಿ ಪೂಜಿಸುವವನೇ ಪೂಜೆಗೊಳ್ಳುವವನಾಗುವನು. ಎಲ್ಲ ದ್ವಂದ್ವಗಳೂ ಸಮ್ಮಿಳನಗೊಂಡು ಒಂದೇ ಪರವಸ್ತುವಿನಲ್ಲಿ ಐಕ್ಯವಾಗುವುದು.

**ಘೃತ ಘೃತವ ಬೆರೆಸಿದಂತೆ, ಕ್ಷೀರ ಕ್ಷೀರವ ಬೆರೆಸಿದಂತೆ**
**ತೈಲ ತೈಲವ ಬೆರೆಸಿದಂತೆ, ನೀರು ನೀರ ಬೆರೆಸಿದಂತೆ**
**ಜ್ಯೋತಿ ಜ್ಯೋತಿಯ ಬೆರೆಸಿದಂತೆ, ಬಯಲು ಬಯಲ ಬೆರೆಸಿದಂತೆ**
**ಪ್ರಾಣ ಪ್ರಾಣ ಸಂಯೋಗವಾದ ಲಿಂಗಸಮರಸವನೇನೆಂಬೆನಯ್ಯ**
**ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ**

ಇಲ್ಲಿ ಎಲ್ಲವೂ ನಷ್ಟವಾಗಿ ಶಿವನಲ್ಲಿ ಸಾಮರಸ್ಯವನ್ನು ಪಡೆಯುವವು:

**ತನು ಸೋಂಕಿ ತನು ನಷ್ಟವಾಯಿತ್ತು**
**ಮನ ಸೋಂಕಿ ಮನ ನಷ್ಟವಾಯಿತ್ತು**
**ಧನ ಸೋಂಕಿ ಧನ ನಷ್ಟವಾಯಿತ್ತು**
**ಭಾವ ಸೋಂಕಿ ಭಾವ ನಷ್ಟವಾಯಿತ್ತು**
**ಅಂತಾದ ಕಾರಣ ಕೂಡಲಚನ್ನಸಂಗಯ್ಯಾ**
**ಶರಣನಂದು ನಷ್ಟವಾಗಿ ನಿಮ್ಮೊಳೇಕಾರ್ಥವಾಯಿತ್ತು**

ಹೀಗೆ ಶಿವನೊಡನೆ ಏಕಾರ್ಥವಾಗುವುದೇ ಐಕ್ಯಸ್ಥಿತಿ. ಇಲ್ಲಿ ಲಿಂಗ-ಅಂಗ, ಗುರು-ಜಂಗಮಗಳ ನಡುವಿನ ಭೇದವಿಲ್ಲ. ಅರಿವು ಮತ್ತು ಅರಿಯುವ ವಸ್ತುವಿನ ನಡುವೆ ಭೇದವಿಲ್ಲ.

**ಲಿಂಗವೆನ್ನೆ ಲಿಂಗೈಕ್ಯವೆನ್ನೆ, ಸಂಗವೆನ್ನೆ ನಿಸ್ಸಂಗವೆನ್ನೆ**
**ಆಯಿತ್ತೆನ್ನೆ ಆಗದೆಂದೆನ್ನೆ, ನೀನೆನ್ನೆ ನಾನೆನ್ನೆ**
**ಚೆನ್ನಮಲ್ಲಿಕಾರ್ಜುನ ಲಿಂಗದಲ್ಲಿ ಘನ ಲಿಂಗೈಕ್ಯವಾದ ಬಳಿಕ**
**ಮತ್ತೇನೂ ಎನಲೊಲ್ಲದೆ ಇದ್ದೆನು**

ಶರಣನು ಈ ಸ್ಥಿತಿಯಲ್ಲಿ ತನ್ನ ತನು-ಮನ-ಭಾವಗಳನ್ನು ಕಳೆದುಕೊಂಡು ಲಿಂಗನಲ್ಲಿ ಸಹಜ ತನ್ಮಯತೆಯನ್ನು ಪಡೆದಾಗ ಅವನಿಗುಂಟಾಗುವ ಪರಮಾನಂದ ಅಳೆಯಲಾಗದ್ದು. ಇಲ್ಲಿ ಪಡೆಯುವುದು ಸಾಧಾರಣ ಸುಖವಲ್ಲ, ಅನಂತ ಸುಖ. ಅದೇ ನಿಜವಾದ ಸುಖ. ಹಾಗೆಂದೇ "ಸ್ವಾನುಭಾವ-ದನುವನರಿಯದವರು ಏತರ ಸುಖಿ?" ಎಂದು ಪ್ರಶ್ನಿಸುತ್ತಾನೆ ಶರಣ. ಬಸವಣ್ಣನವರು ಅಂತಹ ಚರಮಸ್ಥಿತಿಯನ್ನು ಪಡೆದ ಮಹಾ ಅನುಭಾವಿಗಳು. ಆ ನಿತ್ಯಸುಖದ ವರ್ಣನೆಯನ್ನು ಅವರ ಮಾತುಗಳಲ್ಲೇ ಕೇಳೋಣ:

**ನಿಮ್ಮ ನೋಟವನಂತ ಸುಖ, ಕೂಟ ಪರಮಸುಖವಯ್ಯಾ**
**ಅಷ್ಟಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೆನು**
**ಕೂಡಲಸಂಗಮದೇವಾ, ನಿಮ್ಮ ನೋಡಿ**
**ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಂಗಳು**
**ಕಾಯಸಂಗ ನಿಸ್ಸಂಗವಾಗಿ ಇನ್ನಾವ ಸಂಗವನರಿಯೆನಯ್ಯಾ**
**ಮಿಗೆ ಒಲಿದೆನಾಗಿ ಅಗಲಲಾರೆನಯ್ಯಾ!**
**ನಗೆ ಮೊಗದರಸಾ ಅವಧಾರು ಕೂಡಲಸಂಗಮದೇವಾ**
**ಬಗೆದು ಹೋಗುವೆನು ನಾ ನಿಮ್ಮ ಮನವ**

ಅಲ್ಲಮಪ್ರಭು ಹೇಳುವಂತೆ ಈ ಪರಮಾನಂದ ಸ್ಥಿತಿ "ಉರಿಯ ಗಿರಿಯನ್ನು ಅರಗಿನ ಬಾಣದಿಂದ ಎಚ್ಚಂತೆ". "ಕರ್ಪೂರದ ಗಿರಿಯನ್ನು ಉರಿ ಕೊಂಡಂತೆ". ಇದು ಪರಿಪೂರ್ಣ ಬಿಡುಗಡೆಯ ಸ್ಥಿತಿ. "ಸಾಯದೆ, ನೋಯದೆ, ಸ್ವತಂತ್ರವಾಗಿ, ಸಂದುಭೇದವಿಲ್ಲದಿರ್ಪ" ನಿಲುವು ಇದು. ✪

**ಗ್ರಂಥಋಣ:**

೧. ವಚನಧರ್ಮಸಾರ (*ಎಂ.ಆರ್. ಶ್ರೀನಿವಾಸಮೂರ್ತಿ*)
೨. ವಚನಸಾಹಿತ್ಯ ಸಂಗ್ರಹ (*ಸಂ.ಶಿ. ಭೂಸನೂರಮಠ*)
೩. ಶರಣರ ಅನುಭಾವ ಸಾಹಿತ್ಯ (*ಡಾ.ತಿಪ್ಪೇರುದ್ರಸ್ವಾಮಿ*)

**ಅನುಭಾವದ ಆವಶ್ಯಕತೆ**

ಭಕ್ತಿಗೆ ಅನುಭಾವವೇ ಬೀಜ ಕಾಣಿರೋ,
ಭಕ್ತಿಗೆ ಅನುಭಾವವೇ ಆಚಾರ ಕಾಣಿರೋ,
ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು
ಅನುಭಾವ ಮಾಡುವಲ್ಲಿ ವಿನಯದಿಂದ ಕೇಳದಿದ್ದಡೆ
ಕೂಡಲಚನ್ನಸಂಗಯ್ಯ
ಅಘೋರ ನರಕದಲ್ಲಿಕ್ಕದೆ ಬಿಡುವನೆ.

ಅನುಭಾವವಿಲ್ಲದವನ ಭಕ್ತಿ ಅನುವಿಂಗೆ ಬಾರದು
ಅನುಭಾವವಿಲ್ಲದ ಲಿಂಗ ಸಮರಸ ಸುಖವನೀಯದು,
ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು,
ಅನುಭಾವವಿಲ್ಲದೆ ಅರಿಯಬಾರದು
ತನ್ನಲ್ಲಿ ತಾ ಸನ್ನಿಹಿತವುಳ್ಳರೆ ಶಿವಶರಣರ
ಸಂಗವೇತಕ್ಕೆನಲುಂಟೇ?
ಕೂಡಲಸಂಗಮದೇವಯ್ಯ, ನಿಮ್ಮ ಅನುಭಾವವ
ಮಾತಿನ ಮಥನವೆನ್ನಬಹುದೇ?